ಓ.ಎಸ್. ನಂಃ 156/2017

ಡಿ. ಡಬ್ಲ್ಯೂಃ 1

**ದಿನಾಂಕ 07.04.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಟಿ.ಜಿ. ವಕೀಲರಿಂದಃ**

1. ಸಾಕ್ಷಿಗೆ ಈಗ ಒಂದು ಅಸೆಸ್ ಮೆಂಟ್ ರಿಜಿಸ್ಟರ್ ದೃಢಿಕೃತ ನಕಲನ್ನು ತೋರಿಸಿ ಅದರಲ್ಲಿ ಹೆಸರಿಸಿರುವ ಗಿರಿಯಮ್ಮ ಕೋಂ ಮಂಚನಾಯಕ ಯಾರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಗಿರಿಯಮ್ಮ ನನ್ನ ತಾಯಿ ಮತ್ತು ಮಂಚನಾಯಕ ನನ್ನ ತಂದೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು  ನಿಪಿ.16 ಎಂದು ಗುರುತಿಲಸಯಿತು.

2. ನಿಪಿ.16 ರ ದಾಖಲೆಯಲ್ಲಿ ಗಿರಿಯಮ್ಮ ಕೋಂ ಮಂಚನಾಯಕರವರ ಹೆಸರಿನಲ್ಲಿರುವ ಮನೆಯ ವಿಸ್ತೀರ್ಣ ಕೇವಲ 33X24 1/4 ಎಂದು ನಮೂದಗಿರುತ್ತದೆ ಎಂದರೆ ಸರಿ. ನಾನು ನನ್ನ ಸಹಿಯನ್ನು ಕನ್ನಡದಲ್ಲಿ ಮಾಡುತ್ತೇನೆ. ಈ ದಾವೆಯಲ್ಲಿ ನ್ಯಾಯಾಲಯದ ನಿಯೋಗಿರವರು ಸಲ್ಲಿಸಿದ ವರದಿಯ ಜೊತೆ ಇರುವ ಮಹಜರಿನಲ್ಲಿ ಮತ್ತು ತಕ್ಷ ನಕಾಶೆಯಲ್ಲಿ ಸಾಕ್ಷಿಯು ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ನ್ಯಾಯಾಲಯದ ನಿಯೋಗಿ ಸಲ್ಲಿಸಿದ ಮಹಜರ್ ಮತ್ತು 2 ನಕಾಶೆಗಳನ್ನು ನಿಶಾನೆ-ಸಿ.1 ರಿಂದ ನಿಶಾನೆ ಸಿ-3 ಎಂದು, ಸಾಕ್ಷಿಯ ಸಹಿಗಳನ್ನು ನಿಶಾನೆ ಸಿ.1(ಎ) ಮತ್ತು ನಿಶಾನೆ ಸಿ.2(ಎ) ಎಂದು ಗುರುತಿಸಲಾಯಿತು.

3. ನಿಪಿ.16 ರಲ್ಲಿ ಗಿರಿಯಮ್ಮ ಕೋಂ ಮಂಚನಾಯಕರವರ ಹೆಸರಿನಲ್ಲಿರುವ 33X24 1/4 ವಿಸ್ತೀರ್ಣದ ಮನೆಯನ್ನು ಕೆಡವಲು ನಾವು ಪುರಸಭೆಯಿಂದ ಯಾವುದೇ ಪರವಾನಿಗೆಯನ್ನು ಪಡೆದಿರುವುದಿಲ್ಲ. ಅದೇ ರೀತಿ ನಿಪಿ.16 ರ ಸದರಿ ಮನೆಯನ್ನು ಕೆಡವಿ ಪುನರ್ ನಿರ್ಮಿಸಲು ಸಹ ನಾವು ಪುರಸಭೆಯಿಂದ ಯಾವುದೇ ಪರವಾನಿಗೆಯನ್ನು ಪಡೆದಿರುವುದಿಲ್ಲ. ನಿಪಿ.16 ರ ನಮ್ಮ ಪುನರ್ ನಿರ್ಮಿಸಿದ ಮನೆಗೆ ಕಟ್ಟಡ ನಕಾಶೆಯನ್ನು ಸಹ ನಾವು ತಾಯಾರಿಸಿರುವುದಿಲ್ಲ.

4. ನಿಪಿ.16 ರಲ್ಲಿ ಗಿರಿಯಮ್ಮ ಕೋಂ ಮಂಚನಾಯಕರವರ ಹೆಸರಿನಲ್ಲಿರುವ ಸದರಿ ಮನೆಯು ಪ್ರಸ್ತುತ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ನನ್ನ ಸದರಿ ಮನೆಯ ಪೂರ್ವದಿಕ್ಕಿಗೆ 6 ಅಡಿ ಜಾಗವನ್ನು ಬಿಟ್ಟು ನಾನು ನನ್ನ ಮನೆಯನ್ನು ಪುನರ್ ನಿರ್ಮಿಸಿರುತ್ತೇನೆ. ನನ್ನ ಸದರಿ ಮನೆಯ ವಿಸ್ತೀರ್ಣ ಪೂರ್ವ-ಪಶ್ಚಿಮವಾಗಿ 35 ಅಡಿ ಇದೆ ಎಂದರೆ ಸರಿ. ದಾವಾ ಬಿ ಅನುಸೂಚಿ ಆಸ್ತಿಯನ್ನು ಒತ್ತುವರಿ ಮಾಡಿ ನಾನು ನನ್ನ ಸದರಿ ಮನೆಯನ್ನು ಪುನರ್ ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ.

5. ನಿಪಿ.1 ಮತ್ತು 2 ರ ಖರೀದಿ ಪತ್ರದ ಅನುಸಾರ ನ್ಯಾಯಾಲಯದ ನಿಯೋಗಿ ದಾವಾ ಆಸ್ತಿಗಳನ್ನು ಅಳತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**